**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 07-04-2025**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4ನೇ ಪ್ರತಿವಾದಿ ಪರ ಶ್ರೀ. ಎಮ್ ಎಸ್ ಡಿ ವಕೀಲರಿಂದಃ**

7. ಅಸಲ ದಾವಾ ನಂ.83/2023 ಮತ್ತು ಪ್ರಸ್ತುತ ದಾವೆಯಲ್ಲಿ ತೋರಿಸಿರುವ ಆಸ್ತಿಗಳು ಒಂದೇ ಇರುತ್ತವೆ ಎಂದರೆ ಸರಿಯಲ್ಲ. ಅಸಲ ದಾವಾ ನಂ.83/2023 ಮತ್ತು ಈ ದಾವೆಯಲ್ಲಿರುವ ದಾವಾ ಆಸ್ತಿಗಳು ಗಜಾನನ ಲಕ್ಷ್ಮಣ ಕುಲಕರ್ಣಿ ಇವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ನಿಪಿ.1, ನಿಪಿ.2 ಮತ್ತು ನಿಪಿ.6 ರಲ್ಲಿ ಮೃತ ಗಜಾನನ ಲಕ್ಷ್ಮಣ ಕುಲಕರ್ಣಿ ಇವರ ಹೆಸರು ಇದೆ ಎಂದರೆ ಸರಿ, ಹಾಗೂ ಅವರನ್ನು ಮತ್ತು ಅವರ ವಾರಸುದಾರರು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಮಾಲ್ಕೇ ಬಿಕೆ ಗ್ರಾಮದ ಸರ್ವೆ ನಂ.24/1 ಕ್ಷೇತ್ರ 2 ಎಕರೆ 35 ಗುಂಟೆ, ಸರ್ವೆ ನಂ.45/1 ಕ್ಷೇತ್ರ 5 ಎಕರೆ 30 ಗುಂಟೆ, ಸರ್ವೆ ನಂ.45/2 ಕ್ಷೇತ್ರ 3 ಎಕರೆ 21 ಗುಂಟೆ, ಸರ್ವೆ ನಂ.55/2ಬಿ ಕ್ಷೇತ್ರ 3 ಎಕರೆ28 ಗುಂಟೆ, ಸರ್ವೆ ನಂ.17/4 ಕ್ಷೇತ್ರ 2 ಎಕರೆ 31 ಗುಂಟೆ, ಸರ್ವೆ ನಂ.21/2 ಕ್ಷೇತ್ರ 2 ಎಕರೆ 19 ಗುಂಟೆ, ಸರ್ವೆ ನಂ.58 ಕ್ಷೇತ್ರ 10 ಎಕರೆ 9 ಗುಂಟೆ, ಸರ್ವೆ ನಂ.61 ಕ್ಷೇತ್ರ 2 ಎಕರೆ 9 ಗುಂಟೆ ಮತ್ತು ಬಿಬೆಗಾಳಿ ಗ್ರಾಮದ ಸರ್ವೆ ನಂ.198 ಕ್ಷೇತ್ರ 1 ಎಕರೆ 25 ಗುಂಟೆ ಈ ಜಮೀನಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

8. ಗಜಾನನ ಮತ್ತು ಬಿಕಾಜಿ ಇವರ ನಡುವೆ ಯಾವಾಗ ವಿಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ ಏಕೆಂದರೆ ನಾನು ಹುಟ್ಟುವಕ್ಕಿಂತ ಮೊದಲೆ ಆಗಿತ್ತು. ನಾನು ಆ ಬಗ್ಗೆ ದಾಖಲೆಗಳನ್ನು ನೋಡಿಲ್ಲ. ಗಜಾನನ ಕುಲಕರ್ಣಿ ಇವರು ಮೋಸ ಮಾಡಿ ಕೆಲವು ಜಮೀನುಗಳಲ್ಲಿ ತನ್ನ ಹೆಸರನ್ನು

ದಾಖಲು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.24/1, 24/2 ಈ ಜಮೀನುಗಳ ಬಗ್ಗೆ ಎ.ಸಿ ನ್ಯಾಯಾಲಯದಲ್ಲಿ ಪಾರ್ಮ ನಂ.7ಗೆ ಸಂಬಂಧಿಸಿದಂತೆ ವಜಾ ಮಾಡಿರುತ್ತಾರೆ. ಸರ್ವೆ ನಂ.24/1, 24/2 ಇವುಗಳು ಮಂಗೇಶ ಬಿಕಾಜಿ ಕುಲಕರ್ಣಿ ಇವರಿಗೆ ಸಂಬಂಧಿಸಿದವು ಎಂದರೆ ಸರಿ. ಸಾಕ್ಷಿ ಮುಂದುವರೆದ ನಾನು ಕೇವಲ ಅವುಗಳ ಬಗ್ಗೆ ಮ್ಯಾನೇಜರ ಎಂದು ಕರ್ತವ್ಯ ನಿರ್ವಹಿಸಿದ್ದೆನೆ. ಸರ್ವೆ ನಂ.24/1, ಸರ್ವೆ ನಂ.24/2 ಇವುಗಳಿಗೆ ಸಂಬಂದಿಸಿದಂತೆ ಕೃಷ್ಣಾ ಶಾಸ್ತ್ರಿ ರವರ ವಾರಸುದಾರರಾದ ಶ್ರೀಮತಿ ರಾಧಿಕಾ ಕೃಷ್ಣಾ ಶಾಸ್ತ್ರಿ ಮತ್ತು ಶ್ರೀಕಾಂತ ಶಾಸ್ತ್ರಿ, ಶಶಿಕಾಂತ ಶಾಸ್ತ್ರಿ, ಶಾರದಾ ಅನೀಲ ಡುಗೆ, ಪಾರ್ವತಿ ಅನಂತ ಗಾವಡೆ, ಗೋವಿಂದ ಲಕ್ಷ್ಮಣ ಶಾಸ್ತ್ರಿ, ಜೋತಿಬಾ ಲಕ್ಷ್ಮಣ ಶಾಸ್ತ್ರಿ, ಇವರು ಪಾರ್ಮ ನಂ.7ನ್ನು ಕೊಟ್ಟಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಸದರಿ ಪಾರ್ಮ ನಂ.7ಎ ದ್ದರಲ್ಲಿ ಮಂಗೇಶ ಬಿಕಾಜಿ ಕುಲಕರ್ಣಿ ಇವರೆ ಮಾಲೀಕರು ಎಂದು ತೋರಿಸಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಸದರಿ ಪಾರ್ಮ ನಂ.7ನೇದ್ದನ್ನು ವಜಾ ಮಾಡಲಾಗಿದೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಸರ್ವೆ ನಂ.24/1, ಸರ್ವೆ ನಂ.24/2, 45/1, 45/2 ಮತ್ತು 44 ಇವುಗಳನ್ನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಮಂಗೇಶ ಕುಲಕರ್ಣಿ ಮತ್ತು ಪ್ರಕಾಶ ಕುಲಕರ್ಣಿ ಇವರು ಮೊದಲೆ ಪಾಲು ಮಾಡಿಕೊಂಡಿದ್ದಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

9. ದಾವಾ ಮನೆ ಜಿಪಿಸಿ ನಂ.91 ಇದು ಜ್ಞಾನೇಶ್ವರ ಈರಪ್ಪಾ ಕಾಮತಗೇಕರ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮಂಗೇಶ ಇವರು ಆಸ್ತಿಯನ್ನು ಮಾರಾಟ ಮಾಡಿದ್ದಿರಬಹುದು ಎನ್ನುತ್ತಾರೆ. ಈ ಬಗ್ಗೆ ದಾಖಲಾತಿಯನ್ನು ನಾನು ಹಾಜರ ಮಾಡಿಲ್ಲ ಎಂದರೆ ಸರಿ. ಜ್ಞಾನೇಶ್ವರ ಈರಪ್ಪಾ ಕಾಮತಗೇಕರ ಇವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಎಲ್ಲಾ ಆಸ್ತಿಗಳನ್ನು ಮತ್ತು ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೆ ಕೇವಲ ಮಂಗೇಶ ಕುಲಕರ್ಣಿ ಇವರ ಆಸ್ತಿಗಗಳನ್ನು ಮಾತ್ರ ಸೇರಿಸಿ ಖೊಟ್ಟಿದಾವೆಯನ್ನು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ.

10 ಮಂಗೇಶ ಇವರು ಮರಣ ಹೊಂದಿದ ನಂತರ ಅವರ ಆಸ್ತಿಗಳು ಅವರ ವಾರಸುದಾರರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**